# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಮಹಾಲಕ್ಷ್ಮಿ ಛೇಂಬರ್ಸ್, 9/2, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು.

**ದಿನಾಂಕ: 11.04.2017**

## ಪತ್ರಿಕಾ ಪ್ರಕಟಣೆ

## 2017–18ನೇ ಸಾಲಿನ ವಿದ್ಯುಚ್ಛಕ್ತಿ ದರ ಪರಿಷ್ಕರಣೆ:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2017–18 (1ನೇ ಏಪ್ರಿಲ್, 2017ರಿಂದ 30ನೇ ಮಾರ್ಚ್, 2018)ರ ವಿದ್ಯುಚ್ಛಕ್ತಿ ದರಗಳ ಪರಿಷ್ಕರಣೆಯನ್ನು ಅನುಮೋದಿಸಿದೆ. ಆಯೋಗವು ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮತ್ತು ಬೆಳಗಾವಿ ಜಿಲ್ಲೆಯಲ್ಲಿನ ಏಕ್ವಸ್ ವಿಶೇಷ ಆರ್ಥಿಕ ವಲಯಗಳ (AEQUS SEZ) ಗ್ರಾಹಕರಿಗೆ ಅನ್ವಯವಾಗುವ ಪರಿಷ್ಕೃತ ಚಿಲ್ಲರೆ ವಿದ್ಯುಚ್ಛಕ್ತಿ ದರಗಳನ್ನೂ (Retail supply Tariff) ಸಹ ನಿರ್ಧರಿಸಿದೆ. ಆರ್ಥಿಕ ವರ್ಷ 2018ರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಕೆಪಿಟಿಸಿಎಲ್ ವಸೂಲಿ ಮಾಡಬೇಕಾದ ವಿದ್ಯುಚ್ಛಕ್ತಿ ಪ್ರಸರಣ ದರಗಳನ್ನೂ ಸಹ ಪರಿಷ್ಕರಿಸಿದೆ. ಈ ಪರಿಷ್ಕೃತ ದರಗಳು ದಿನಾಂಕ:1.4.2017 ಅಥವಾ ನಂತರ ಬರುವ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಯಾಗುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಪ್ರವರ್ಗಗಳ ಗ್ರಾಹಕರಿಗೆ ಪ್ರತಿ ಯೂನಿಟ್ಟಿಗೆ 148 ಪೈಸೆಗಳ ಸಮಾನ ಏರಿಕೆಯನ್ನು ಕೋರಿದ್ದವು. ಅದಲ್ಲದೆ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಯೂನಿಟ್ಟಿಗೆ 22 ಪೈಸೆಯಂತೆ ಇಂಧನ ಹೊಂದಾಣಿಕೆ ಶುಲ್ಕವನ್ನು (ಎಫ್.ಎ.ಸಿ.) ಏಪ್ರಿಲ್–ಜೂನ್ 2017ರ ಅವಧಿಗೆ ವಸೂಲಿ ಮಾಡಲು ಸಹಾ ಕೋರಿದ್ದವು. ತದನಂತರ, ಬೆಸ್ಕಾಂ ಒಂದು ತಿದ್ದುಪಡಿ ಅರ್ಜಿ ಮುಖಾಂತರ ಗೃಹ ಬಳಕೆ ಗ್ರಾಹಕರಿಗೆ ಟೆಲಿಸ್ಕೋಪಿಕ್ ದರ ಕೋರಿದ್ದಲ್ಲದೆ, ಹೆಚ್.ಟಿ. ಗ್ರಾಹಕರಿಗೆ ವಿದ್ಯುತ್ ಬೇಡಿಕೆ ದರಗಳನ್ನು (ಡಿಮ್ಯಾಂಡ್ ಚಾರ್ಜ್) ಹೆಚ್ಚಿಸಲು ಹಾಗೂ ವಿದ್ಯುಚ್ಛಕ್ತಿ ಬಳಕೆದರ ಕಡಿಮೆ ಮಾಡಲು ಕೋರಿತ್ತು.

ಆಯೋಗವು ಎಲ್ಲಾ ಪ್ರವರ್ಗಗಳ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 53 ಪೈಸೆಗಳ (ಪ್ರತಿ ಯೂನಿಟ್‌ಗೆ 5 ಪೈಸೆ ಇಂಧನ ಹೊಂದಾಣಿಕೆ ಶುಲ್ಕವನ್ನೂ ಸೇರಿದಂತೆ ಪ್ರತಿ ಯೂನಿಟ್‌ಗೆ 20 ಪೈಸೆಯಿಂದ 55 ಪೈಸೆವರೆಗೂ) ಸರಾಸರಿ ವಿದ್ಯುಚ್ಛಕ್ತಿ ದರ ಏರಿಕೆಯನ್ನು ಅನುಮೋದಿಸಿರುತ್ತದೆ. ಆಯೋಗವು ಎಲ್ಲಾ ಎಲ್.ಟಿ. ಮತ್ತು ಎಚ್.ಟಿ. ಗ್ರಾಹಕರಿಗೆ ನಿಗದಿತ ಶುಲ್ಕವನ್ನು ಪ್ರತಿ ಕಿ.ವ್ಯಾ. / ಹೆಚ್.ಪಿ. / ಕೆ.ವಿ.ಎ.ಗೆ ರೂ.5 ರಿಂದ ರೂ.20 ರವರೆಗಿನ ಕನಿಷ್ಠ ಏರಿಕೆಯನ್ನು ಸಹಾ ಅನುಮೋದಿಸಿದೆ. **ವಿದ್ಯುತ್ ಸರಬರಾಜು ಕಂಪನಿಗಳು ಕೋರಿದ್ದ ಒಟ್ಟು ಶೇ.25ರಷ್ಟು ದರ ಹೆಚ್ಚಳದ ಪ್ರತಿಯಾಗಿ ದರ ಹೆಚ್ಚಳ ಶೇ.8ರಷ್ಟಾಗಿರುತ್ತದೆ.**

ಈ ಕೆಳಗಿನ ಕಾರಣಗಳಿಂದಾಗಿ ವಿದ್ಯುಚ್ಛಕ್ತಿ ದರ ಏರಿಕೆ ಮಾಡುವುದು ಅಗತ್ಯವಾಗಿರುತ್ತದೆ:

- ಆರ್ಥಿಕ ವರ್ಷ–16ರ ವಸೂಲಾಗಬೇಕಾದ ಕಂದಾಯ ಕೊರತೆ ರೂ. 2296 ಕೋಟಿಯಾಗಿದ್ದು, ಇದು ಪ್ರತಿ ಯೂನಿಟ್‌ಗೆ **42** ಪೈಸೆಯಷ್ಟಾಗುತ್ತದೆ. ಇದು ಮಳೆ ಅಭಾವದಿಂದಾಗಿ ಅಗ್ಗದ ಜಲವಿದ್ಯುತ್‌ನ ಲಭ್ಯತೆ ಕಡಿಮೆಯಾಗಿ, ತತ್ಪರಿಣಾಮದ ಹೆಚ್ಚು ವೆಚ್ಚದ ಅಲ್ಪಾವಧಿ ವಿದ್ಯುತ್ ಖರೀದಿ ಕಾರಣದಿಂದಾಗಿರುತ್ತದೆ.

- ಆರ್ಥಿಕ ವರ್ಷ–18ಕ್ಕೆ ವಿದ್ಯುತ್ ಖರೀದಿ ವೆಚ್ಚದ ಹೆಚ್ಚಳ ಪ್ರತಿ ಯೂನಿಟ್‌ಗೆ **6** ಪೈಸೆಯಷ್ಟಿದ್ದು, ಇದು ಮುಖ್ಯವಾಗಿ ಉಷ್ಣ ವಿದ್ಯುತ್ ಘಟಕಗಳ ಇಂಧನ ವೆಚ್ಚದಲ್ಲಿನ ಹೆಚ್ಚಳದಿಂದಾಗಿದೆ.

- ಪ್ರತಿ ಯೂನಿಟ್‌ಗೆ ಸರಾಸರಿ 20 ಪೈಸೆ ಹೆಚ್ಚಳದಂತೆ ಏಪ್ರಿಲ್–ಜೂನ್ 2018ರ ಅವಧಿಗೆ ರೂ.280 ಕೋಟಿ ಇಂಧನ ಹೊಂದಾಣಿಕೆ ಶುಲ್ಕವನ್ನು ಸಾಮಾನ್ಯವಾಗಿ ವಸೂಲಿ ಮಾಡಬಹುದಾಗಿರುತ್ತದೆ. ಆದರೆ, ಗ್ರಾಹಕರ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಸಲುವಾಗಿ, ಆಯೋಗವು ಆರ್ಥಿಕ ವರ್ಷ–2018ರ ಅವಧಿಯಲ್ಲಿ ಈ ಇಂಧನ ಹೊಂದಾಣಿಕೆ ಶುಲ್ಕವನ್ನು ಪ್ರತಿ ಯೂನಿಟ್‌ಗೆ ಸರಾಸರಿ **5** ಪೈಸೆಯಂತೆ ಸಂಗ್ರಹಿಸಲು ಅನುಮತಿ ನೀಡಿದೆ.

**ಹೊಸ ದರ ಆದೇಶದ ಪ್ರಮುಖ ಅಂಶಗಳು:**

- ಹೆಚ್.ಟಿ. ಕೈಗಾರಿಕೆ ಮತ್ತು ಹೆಚ್.ಟಿ. ವಾಣಿಜ್ಯ ಪ್ರವರ್ಗಗಳ ಅಡಿಯಲ್ಲಿ ಬಳಕೆಯನ್ನು ಉತ್ತೇಜಿಸಲು, ಎರಡನೇ ಹಂತ (ಒಂದು ಲಕ್ಷ ಯೂನಿಟ್‌ಗಳ ಮೇಲ್ಪಟ್ಟು)ದಲ್ಲಿನ ಬಳಕೆಗೆ ದರ ಹೆಚ್ಚಳ ಒಂದನೇ ಹಂತದಲ್ಲಿನ ಹೆಚ್ಚಳಕ್ಕಿಂತ ಶೇ.50ರಷ್ಟು ಕಡಿಮೆ ಆಗಿರುತ್ತದೆ (ಒಂದನೇ ಹಂತದಲ್ಲಿನ 40 ಪೈಸೆಗೆ ಪ್ರತಿಯಾಗಿ ಎರಡನೇ ಹಂತದಲ್ಲಿ 20 ಪೈಸೆ).
- ಬೆಳಗಿನ ಗರಿಷ್ಠ ಬಳಕೆ ಸಮಯದಲ್ಲಿ (morning peak hour) ಅಂದರೆ, 6.00ರಿಂದ 10.00ಗಂಟೆಯವರೆಗೆ ಬಳಸುವ ವಿದ್ಯುಚ್ಛಕ್ತಿಗೆ ದಿನದ ಸಮಯ (Time of Day) (ಟಿ.ಓಡಿ.) ದರವನ್ನು ಜಾರಿಗೆ ತರಲಾಗಿದೆ. ಟಿ.ಓ.ಡಿ. ಅಡಿಯಲ್ಲಿ ಪ್ರೋತ್ಸಾಹಕ ಮತ್ತು ದಂಡಗಳ ಮೊತ್ತ ಪ್ರತಿ ಯೂನಿಟ್ಟಿಗೆ 1 ರೂಪಾಯಿ ಆಗಿರುತ್ತದೆ.
- ಹೆಚ್.ಟಿ 2(ಎ) ದರದಡಿಯಲ್ಲಿ ಬರುವ ಕೈಗಾರಿಕೆಯ ಆವರಣದಲ್ಲಿ ಸ್ಥಾಪಿತವಾದ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳಿಗೆ ಪ್ರತಿ ಯೂನಿಟ್ಟಿಗೆ 50 ಪೈಸೆ ರಿಯಾಯಿತಿ ನೀಡಿದೆ.
- ಗ್ರಾಹಕರ ಸಮಸ್ಯೆಯನ್ನು ಕಾಲಮಿತಿಯೊಳಗೆ ಪರಿಹರಿಸಲು, ಎಸ್ಕಾಂಗಳು ಪ್ರತಿ ಉಪವಿಭಾಗದಲ್ಲಿ ಗ್ರಾಹಕ ಸಂಪರ್ಕ ಸಭೆಗಳನ್ನು ಮೂರು ತಿಂಗಳಿಗೊಮ್ಮೆ ನಡೆಸುವಂತೆ ಆಯೋಗವು ಆದೇಶಿಸಿದೆ. ಅಂಥ ಸಭೆಗಳನ್ನು ನಡೆಸಲು ವಿಫಲವಾದಲ್ಲಿ, ಆಯೋಗವು ಪ್ರತಿ ಉಪವಿಭಾಗಕ್ಕೆ ಒಂದು ಲಕ್ಷ ರೂಪಾಯಿಯವರೆಗೂ ದಂಡ ಹಾಕಲಿದೆ, ಹಾಗೂ ಅಂಥ ದಂಡವನ್ನು ಸಂಬಂಧಿಸಿದ ಅಧಿಕಾರಿಯು ಪಾವತಿ ಮಾಡಬೇಕಾಗುತ್ತದೆ.

ಆಯೋಗವು, ಎಲ್ಲಾ ಪರವಾನಿಗೆದಾರರ ಆರ್ಥಿಕ ವರ್ಷ 2016ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನವನ್ನು ತೆಗೆದುಕೊಂಡಿದ್ದು, ತತ್ಪರಿಣಾಮದ ಕೊರತೆಯನ್ನು ಆರ್ಥಿಕ ವರ್ಷ 2018ರ ವಾರ್ಷಿಕ ಕಂದಾಯ ಅಗತ್ಯತೆಯಲ್ಲಿ ಸೇರಿಸಲಾಗಿದೆ.

ಆಯೋಗವು ಬಹುವರ್ಷ ವಿದ್ಯುಚ್ಛಕ್ತಿ ದರ (MYT) ವಿನಿಯಮಗಳ ತತ್ವಗಳ ಪ್ರಕಾರ ಆರ್ಥಿಕ ವರ್ಷ 2018ರ ಕಂದಾಯ ಅಗತ್ಯತೆಯನ್ನು ಸಹಾ ನಿರ್ಧರಿಸಿದೆ.

ಆಯೋಗವು, ತಾನು ಹಿಂದಿನ ಆದೇಶಗಳಲ್ಲಿ ನೀಡಿದ್ದ ನಿರ್ದೇಶನಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳ ಪರಿಪಾಲನೆಯನ್ನು ಸಹಾ ಪರಿಶೀಲಿಸಿದೆ.

## ವಿದ್ಯುತ್ ದರ ಪರಿಷ್ಕರಣೆ ಆದೇಶ 2017ರ ಪ್ರಮುಖ ಅಂಶಗಳು:

**ಗೃಹಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:**

**ನಗರ ಪ್ರದೇಶಗಳಲ್ಲಿನ** ಗೃಹ ಬಳಕೆಯ ಗ್ರಾಹಕರು ಬಳಸುವ ಮಾಹೆಯಾನ 30 ಯೂನಿಟ್‌ಗಳವರೆಗಿನ ವಿದ್ಯುಚ್ಛಕ್ತಿಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.00 ಅನ್ನು ರೂ.3.25ಕ್ಕೆ ಏರಿಸಲಾಗಿದೆ ಮತ್ತು 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.4.40 ಅನ್ನು ರೂ.4.70ಕ್ಕೆ ಏರಿಸಲಾಗಿದೆ. 101ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.5.90 ಅನ್ನು ರೂ.6.25ಕ್ಕೆ ದರ ಏರಿಸಲಾಗಿದೆ. 200 ಯೂನಿಟ್‌ಗಳನ್ನು ಮೇಲ್ಪಟ್ಟ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.6.90 ಅನ್ನು ರೂ.7.30ಕ್ಕೆ ದರ ಏರಿಸಲಾಗಿದೆ.

ಬೆಸ್ಕಾಂನ ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ, ಈ ಕೆಳಗೆ ವಿವರಿಸಿದಂತೆ ಮೂರು ಅಧಿಕ ಹಂತಗಳನ್ನು ಜಾರಿಗೆ ತರಲಾಗಿದೆ:

201 ರಿಂದ 300 ಯೂನಿಟ್‌ಗಳವರೆಗಿನ ವಿದ್ಯುಚ್ಛಕ್ತಿ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.6.90 ರಿಂದ ರೂ.7.30ಕ್ಕೆ ಹೆಚ್ಚಿಸಲಾಗಿದೆ.

301ರಿಂದ 400 ಯೂನಿಟ್‌ಗಳವರೆಗಿನ ವಿದ್ಯುಚ್ಛಕ್ತಿ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.6.90 ರಿಂದ ರೂ.7.35ಕ್ಕೆ ಹೆಚ್ಚಿಸಲಾಗಿದೆ.

400 ಯೂನಿಟ್‌ಗಳಿಗೆ ಮೇಲ್ಪಟ್ಟ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.690 ರಿಂದ ರೂ.7.40ಕ್ಕೆ ಹೆಚ್ಚಿಸಲಾಗಿದೆ.

**ಗ್ರಾಮಾಂತರ ಪ್ರದೇಶದ** ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.2.90 ಅನ್ನು ರೂ.3.15ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.4.10 ಅನ್ನು ರೂ.4.40ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ

ವಿದ್ಯುಚ್ಛಕ್ತಿ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.5.60ರಿಂದ ರೂ.5.95ಕ್ಕೆ ಹಾಗೂ 200 ಯೂನಿಟ್ ಮೇಲ್ಪಟ್ಟ ಬಳಕೆಗೆ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್‌ಗೆ ರೂ.6.40 ರಿಂದ ರೂ.6.80ಕ್ಕೆ ಹೆಚ್ಚಿಸಲಾಗಿದೆ.

ಬೆಸ್ಕಾಂನ ಅರೆನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ವಿವರಿಸಿದಂತೆ ಎರಡು ಅಧಿಕ ಹಂತಗಳನ್ನು ಜಾರಿಗೆ ತರಲಾಗಿದೆ:

201 ರಿಂದ 300 ಯೂನಿಟ್‌ಗಳವರೆಗೆ ಬಳಸುವ ವಿದ್ಯುಚ್ಛಕ್ತಿಗೆ ದರ ಪ್ರತಿ ಯೂನಿಟ್‌ಗೆ ರೂ.6.40 ರಿಂದ ರೂ.6.80ಕ್ಕೆ ಹೆಚ್ಚಿಸಲಾಗಿದೆ.

300 ಯೂನಿಟ್‌ಗಳಿಗೆ ಮೇಲ್ಪಟ್ಟು ಬಳಸುವ ವಿದ್ಯುಚ್ಛಕ್ತಿಗೆ ದರ ಪ್ರತಿ ಯೂನಿಟ್‌ಗೆ ರೂ.6.40 ರಿಂದ ರೂ.6.85ಕ್ಕೆ ಹೆಚ್ಚಿಸಲಾಗಿದೆ.

ಗೃಹಬಳಕೆ ಗ್ರಾಹಕರಿಗೆ ಪ್ರತಿ ಕಿ.ವ್ಯಾ.ಗೆ ರೂ.5ರಿಂದ ರೂ.10ರವರೆಗೆ ನಿಗದಿತ ಶುಲ್ಕಗಳನ್ನು ಹೆಚ್ಚಿಸಲಾಗಿದೆ.

## ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 10 ಪೈಸೆಯಿಂದ 20 ಪೈಸೆಯವರೆಗೆ ಹೆಚ್ಚಿಸಲಾಗಿದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪ್ರದೇಶ ಮತ್ತು ಬೆಸ್ಕಾಂ ವ್ಯಾಪ್ತಿಯ ಇತರೆ ಮಹಾನಗರ ಪ್ರದೇಶಗಳ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 500 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 5.25 (ಈಗಿರುವ ದರ ರೂ. 5.10) ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.50ರಂತೆ (ಈಗಿರುವ ದರ ರೂ.6.30) ದರಗಳನ್ನು ಪರಿಷ್ಕರಿಸಲಾಗಿದೆ.

ಇತರೆ ಎಸ್ಕಾಂಗಳ ವ್ಯಾಪ್ತಿಯಲ್ಲಿನ ಮಹಾನಗರ ಪ್ರದೇಶಗಳಿಗೆ ಅನ್ವಯವಾಗುವ ಹೊಸ ದರಗಳು–ಮೊದಲ 500 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 5.10 (ಈಗಿರುವ ದರ ರೂ. 4.95), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.6.05 (ಈಗಿರುವ ದರ ರೂ.5.85) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.35 (ಈಗಿರುವ ದರ ರೂ. 6.15)ರಂತೆ ನಿಗದಿಪಡಿಸಲಾಗಿದೆ.

ಇತರೆ ಎಲ್ಲಾ ಪ್ರದೇಶಗಳಲ್ಲಿ ಹೊಸ ದರಗಳು–ಮೊದಲ 500 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.00 (ಈಗಿರುವ ದರ ರೂ.4.85), 501 ಯೂನಿಟ್‌ನಿಂದ 1000 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.5.90 (ಈಗಿರುವ ದರ ರೂ.5.70) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.20 (ಈಗಿರುವ ದರ ರೂ.6.00)ರಂತೆ ನಿಗದಿಪಡಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪ್ರದೇಶ ಹಾಗೂ ಬೆಸ್ಕಾಂ ವ್ಯಾಪ್ತಿಯ ಇತರೆ ಮಹಾನಗರ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ದರಗಳನ್ನು ಪ್ರತಿ ಯೂನಿಟ್‌ಗೆ 20 ರಿಂದ 40 ಪೈಸೆಗಳಷ್ಟು ಹೆಚ್ಚಿಸಲಾಗಿದೆ. ಮೊದಲ ಒಂದು ಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವ ಹೊಸ ದರ ರೂ.6.65 (ಈಗಿರುವ ದರ ರೂ.6.25) ಹಾಗೂ ಒಂದು ಲಕ್ಷ ಯೂನಿಟ್‌ಗಳಿಗಿಂತ ಹೆಚ್ಚಾದ ವಿದ್ಯುಚ್ಛಕ್ತಿ ಬಳಕೆಗೆ ಹೊಸದರವನ್ನು ಪ್ರತಿ ಯೂನಿಟ್‌ಗೆ ರೂ.6.95 (ಈಗಿರುವ ದರ ರೂ.6.75)ರಂತೆ ನಿಗದಿಪಡಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಮತ್ತು ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿನ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ದರವನ್ನು ಪ್ರತಿ ಯೂನಿಟ್‌ಗೆ 20ರಿಂದ 40 ಪೈಸೆಗಳಷ್ಟು ಹೆಚ್ಚಿಸಲಾಗಿದೆ. ಮೊದಲ ಒಂದು ಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವ ಹೊಸ ದರ ರೂ.6.60 (ಈಗಿರುವ ದರ ರೂ.6.20) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಹೊಸ ದರ ಪ್ರತಿ ಯೂನಿಟ್‌ಗೆ ರೂ.6.80 (ಈಗಿರುವ ದರ ರೂ.6.60) ರಂತೆ ನಿಗದಿಪಡಿಸಲಾಗಿದೆ.

## ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ಎಲ್.ಟಿ. ವಾಣಿಜ್ಯ ಬಳಕೆದಾರರ ಪ್ರವರ್ಗಕ್ಕೆ ಅನ್ವಯವಾಗುವ ದರ ಏರಿಕೆ ಪ್ರತಿ ಯೂನಿಟ್‌ಗೆ 35 ಪೈಸೆ. ಬೃಹತ್ ಬೆಂಗಳೂರು ಮಹಾನಗರ ಪ್ರದೇಶ ಮತ್ತು ಇತರೆ ಮಹಾನಗರ ಪ್ರದೇಶಗಳನ್ನು ಒಳಗೊಂಡು ಎಲ್ಲಾ ನಗರ ಪ್ರದೇಶಗಳಲ್ಲಿನ ಎಲ್.ಟಿ. ವಾಣಿಜ್ಯ ಬಳಕೆದಾರರಿಗೆ ಮೊದಲ 50 ಯೂನಿಟ್‌ಗಳಿಗೆ ರೂ.7.50 (ಈಗಿರುವ ದರ ರೂ.7.15) ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.50 (ಈಗಿರುವ ದರ ರೂ.8.15) ರಂತೆ ನಿಗದಿಪಡಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿನ ವಾಣಿಜ್ಯ ಬಳಕೆದಾರರಿಗೆ ಮೊದಲ 50 ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ಹೊಸದರ ರೂ.7.00 ಬಳಕೆಗೆ ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.00 ರಂತೆ ನಿಗದಿಪಡಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪ್ರದೇಶ ಹಾಗೂ ಬೆಸ್ಕಾಂ ವ್ಯಾಪ್ತಿಯ ಇತರೆ ಮಹಾನಗರ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 20 ಪೈಸೆಯಿಂದ 40 ಪೈಸೆಗಳಷ್ಟು ಹೆಚ್ಚಿಸಲಾಗಿದೆ. ಮೊದಲ 2 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.45 (ಈಗಿರುವ ದರ ರೂ.8.05) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.55 (ಈಗಿರುವ ದರ ರೂ.8.35)ರಂತೆ ಹೊಸ ದರಗಳನ್ನು ನಿಗದಿಪಡಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಹಾಗೂ ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 20 ಪೈಸೆಯಿಂದ 40 ಪೈಸೆಗಳಷ್ಟು ಹೆಚ್ಚಿಸಲಾಗಿದೆ. ಮೊದಲ 2 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.25 (ಈಗಿರುವ ದರ ರೂ.7.85) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.35 (ಈಗಿರುವ ದರ ರೂ. 8.15)ರಂತೆ ಹೊಸ ದರಗಳನ್ನು ನಿಗದಿಪಡಿಸಲಾಗಿದೆ.

**ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:**

ಆಯೋಗವು ಕುಡಿಯುವ ನೀರು ಸರಬರಾಜು ಮಾಡುವ ಎಲ್.ಟಿ. ಸ್ಥಾವರಗಳಲ್ಲಿ ಬಳಸಲಾಗುವ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ರೂ.3.90 ರಿಂದ ರೂ.4.25ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 35 ಪೈಸೆಯಷ್ಟು ಹೆಚ್ಚಿಸಿದೆ. ಹೆಚ್.ಟಿ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ದರ ರೂ.4.50 ರಿಂದ ರೂ.4.85ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 35 ಪೈಸೆಯಷ್ಟು ಹೆಚ್ಚಿಸಿದೆ.

**ಎಲ್.ಇ.ಡಿ. / ಇಂಡಕ್ಷನ್ ಬೀದಿದೀಪಗಳಿಗೆ ರಿಯಾಯಿತಿ ವಿದ್ಯುತ್ ದರ:**

ಆಯೋಗವು, ತಮ್ಮ ಬೀದಿದೀಪ ಸ್ಥಾವರಗಳಿಗೆ ಮಿತ ವಿದ್ಯುತ್ ಬಳಸುವ ಎಲ್.ಇ.ಡಿ. / ಇಂಡಕ್ಷನ್ ಬಲ್ಬ್‌ಗಳನ್ನು ಅಳವಡಿಸುವ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಕ ದರ ಪ್ರತಿ ಯೂನಿಟ್‌ಗೆ ರೂ.4.85ನ್ನು (ಈಗಿರುವ ದರ ರೂ.4.50) ಮುಂದುವರೆಸಿದೆ. ಇತರೆ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವ ಪರಿಷ್ಕೃತ ದರವನ್ನು ಪ್ರತಿ ಯೂನಿಟ್‌ಗೆ ರೂ.5.85 (ಈಗಿರುವ ದರ ರೂ.5.50) ರಂತೆ ನಿಗದಿಪಡಿಸಲಾಗಿದೆ.

**ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:**

ಆಯೋಗವು, ಎಲ್.ಟಿ. ಪ್ರವರ್ಗಕ್ಕೆ ಸೇರಿದ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ದರ ಹೆಚ್ಚಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪ್ರದೇಶ, ಇತರೆ ಮಹಾನಗರ ಪ್ರದೇಶಗಳು ಹಾಗೂ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಮೊದಲ 200 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.6.50 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.25) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.7.75 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.45). ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.5.95 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.5.70) ಹಾಗೂ 200 ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.90) ದರವನ್ನು ನಿಗದಿಪಡಿಸಲಾಗಿದೆ.

ಹೆಚ್.ಟಿ. ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಸರ್ಕಾರಿ ಆಸ್ಪತ್ರೆಗಳು, ಚಾರಿಟೆಬಲ್ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.40 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.00) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.80 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.50) ದರ ನಿಗದಿಪಡಿಸಲಾಗಿದೆ.

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಖಾಸಗಿ ವಿದ್ಯಾ ಸಂಸ್ಥೆಗಳ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಅನ್ವಯವಾಗುವ ಪರಿಷ್ಕೃತ ದರ ರೂ.7.40 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.00) ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚಿನ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.80 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.50) ದರ ನಿಗದಿಪಡಿಸಲಾಗಿದೆ.

## ಹಸಿರು ದರ (Green Tariff):

ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಖರೀದಿ ಮತ್ತು ಉಪಯೋಗವನ್ನು ಉತ್ತೇಜಿಸಲು ಹೆಚ್.ಟಿ. ಕೈಗಾರಿಕೆ ಮತ್ತು ಹೆಚ್.ಟಿ. ವಾಣಿಜ್ಯ ಗ್ರಾಹಕರಿಗೆ ಐಚ್ಛಿಕವಾದ ಪ್ರತಿ ಯೂನಿಟ್‌ಗೆ ಪ್ರಸ್ತುತ 50 ಪೈಸೆ ಹಸಿರು ದರವನ್ನು ಮುಂದುವರೆಸಲಾಗಿದೆ.

## ಸರಕಾರದ ಸಹಾಯಧನ:

2017–18ನೇ ಸಾಲಿನಲ್ಲಿ 10 ಹೆಚ್.ಪಿ.ವರೆಗಿನ ಸಾಮರ್ಥ್ಯದ 26.57 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಹಾಗೂ 29 ಲಕ್ಷ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ ಉಚಿತ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ 2016–17ನೇ ಸಾಲಿನ ಕೊಟ್ಟ ರೂ.8838 ಕೋಟಿಗಳ ಸಹಾಯಧನದ ಪ್ರತಿಯಾಗಿ, ಸರಕಾರ ಕೊಡಬೇಕಾದ ಅಂದಾಜು ಸಹಾಯಧನ ಮೊತ್ತ ರೂ.9938 ಕೋಟಿಗಳು. ಆರ್ಥಿಕ ವರ್ಷ 2018ನೇ ಸಾಲಿನಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಅಂದಾಜಿತ ಬಳಕೆ 19323 ದಶಲಕ್ಷ ಯೂನಿಟ್‌ಗಳು ಮತ್ತು ಭಾಗ್ಯಜ್ಯೋತಿ / ಕುಟೀರಜ್ಯೋತಿ ಗ್ರಾಹಕರಿಗೆ 387 ದಶಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿ ಬಳಕೆಯಾಗಲಿದೆ ಎಂದು ನಿರ್ಧರಿಸಲಾಗಿದೆ.

## ವಿದ್ಯುತ್ ಸರಬರಾಜು ಕಂಪನಿಗಳ 2017–18ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ (ARR):

ವಿದ್ಯುತ್ ಸರಬರಾಜು ಕಂಪನಿಗಳು 2017–18ನೇ ಸಾಲಿಗೆ ಸಲ್ಲಿಸಿದ ದರ ಅರ್ಜಿಗಳನ್ನು ಕೂಲಂಕುಷವಾಗಿ ಪರೀಶೀಲಿಸಿದ ಆಯೋಗವು ಆರ್ಥಿಕ ವರ್ಷ 2018ರಲ್ಲಿ 54453 ದಶಲಕ್ಷ ಯೂನಿಟ್‌ಗಳನ್ನು (ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ಶೇ.16.96 ಹೊರತುಪಡಿಸಿ) ಸರಬರಾಜು ಮಾಡಲಿರುವ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಟ್ಟು ರೂ.34924 ಕೋಟಿಗಳ ಅಂದಾಜು ಬೇಡಿಕೆಗೆ ಅನುಮೋದನೆ ನೀಡಿದೆ. ಎಸ್ಕಾಂಗಳು 2015–16ರ ಸಾಲಿನ 61290 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿಗೆ (2016–17ನೇ ಸಾಲಿನಲ್ಲಿ ಅನುಮೋದನೆಯಾದ ವಿದ್ಯುಚ್ಛಕ್ತಿ ಖರೀದಿ 65439 ದಶಲಕ್ಷ ಯೂನಿಟ್) ಪ್ರತಿಯಾಗಿ 2017–18ನೇ ಸಾಲಿನಲ್ಲಿ 65576 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿ ಮಾಡಲಿವೆ. ಒಟ್ಟು ವಿದ್ಯುಚ್ಛಕ್ತಿ ಖರೀದಿಯಲ್ಲಿ ಆರ್ಥಿಕ ವರ್ಷ 2017–18ಕ್ಕೆ ವಾರ್ಷಿಕ ಕಂದಾಯ ಬೇಡಿಕೆ ರೂ.16914 ಕೋಟಿಗಳಿರುವ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸುಮಾರು ಶೇ.47ಕ್ಕಿಂತ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿ ಅಂದರೆ, 30880 ದಶಲಕ್ಷ ಯೂನಿಟ್‌ಗಳನ್ನು ಬಳಸಲಿದೆ.

ಬೆಸ್ಕಾಂ, ಮೆಸ್ಕಾಂ, ಸೆಸ್ಕ್, ಹೆಸ್ಕಾಂ, ಜೆಸ್ಕಾಂ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಇವುಗಳು ಒಟ್ಟಾರೆ ಕಾರ್ಯಾಚರಣೆ ವೆಚ್ಚ ಮತ್ತು ವಿದ್ಯುತ್ ಖರೀದಿ ವೆಚ್ಚಗಳು ಹೆಚ್ಚಾಗಿವೆ ಎಂದು ಉಲ್ಲೇಖಿಸಿ, 2017–18ನೇ ಸಾಲಿನ ಪರಿಷ್ಕೃತ ದರಗಳ ಪ್ರಸ್ತಾವನೆಗಳೊಂದಿಗೆ ವಾರ್ಷಿಕ ಕಂದಾಯ ಬೇಡಿಕೆಗೆ ಆಯೋಗದ ಅನುಮೋದನೆಗಾಗಿ ಅರ್ಜಿಗಳನ್ನು ಸಲ್ಲಿಸಿದ್ದವು. 2017–18ನೇ ಸಾಲಿಗೆ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ(ARR)ಈ ಕೆಳಕಂಡಂತೆ ಇವೆ:

***2017–18ನೇ ಸಾಲಿನ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ***

*(ರೂ. ಕೋಟಿಗಳಲ್ಲಿ)*

| ವಿದ್ಯುತ್ ಸರಬರಾಜು ಪರವಾನಿಗೆದಾರರು | ಆರ್ಥಿಕ ವರ್ಷ 18 | |
|---|---|---|
| | ಸಲ್ಲಿಸಿದಂತೆ | ಅನುಮೋದಿಸಿದಂತೆ |
| ಬೆಸ್ಕಾಂ | 18915.97 | 16914.19 |
| ಮೆಸ್ಕಾಂ | 3558.09 | 3073.35 |
| ಸೆಸ್ಕ್ | 4648.42 | 3621.58 |
| ಹೆಸ್ಕಾಂ | 7629.63 | 6791.16 |
| ಜೆಸ್ಕಾಂ | 5345.83 | 4523.29 |
| ಹುಕ್ಕೇರಿ ಆರ್.ಇ.ಸಿ.ಎಸ್. | 184.13 | 155.39 |
| ಒಟ್ಟು | **40282.07** | **35078.96** |

**ಆರ್ಥಿಕ ವರ್ಷ 2018ರ ಕಂದಾಯ ಕೊರತೆ:**

ಆಯೋಗವು, ಆರ್ಥಿಕ ವರ್ಷ 2016ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದಲ್ಲಿ ರೂ.2296 ಕೋಟಿ ಕಂದಾಯ ಕೊರತೆಯನ್ನು ನಿರ್ಧರಿಸಿದೆ. ಸದರಿ ಕಂದಾಯ ಕೊರತೆ ಮತ್ತು ಆರ್ಥಿಕ ವರ್ಷ 2018ಕ್ಕೆ ಅಂದಾಜಿಸಿದ ಕಂದಾಯ ಕೊರತೆ ರೂ.320 ಕೋಟಿ ಸೇರಿ, ಒಟ್ಟಾರೆ ಕೊರತೆ ರೂ.2616 ಕೋಟಿಯಾಗಲಿದ್ದು, ಆರ್ಥಿಕ ವರ್ಷ 2018ರಲ್ಲಿ ದರ ಹೆಚ್ಚಳದಿಂದ ಇದನ್ನು ಸರಿದೂಗಿಸಬೇಕಿದೆ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ 2017–18ಕ್ಕೆ ಅನ್ವಯವಾಗುವ ವಿದ್ಯುತ್ ಪ್ರಸರಣ ದರ ನಿಗದಿ:**

ಆಯೋಗವು 2016ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನದ ನಂತರ, ಹಿಂದಿನಿಂದ ಮುಂದುವರೆಸಿದ ರೂ.417.58 ಕೋಟಿ ಹೆಚ್ಚುವರಿಯೂ ಸೇರಿ 2018ನೇ ಸಾಲಿಗೆ ರೂ.2753.70 ಕೋಟಿ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ. 2016–17ರಲ್ಲಿ ಅನುಮೋದಿಸಿದ ಪ್ರತಿ ಮೆ.ವ್ಯಾ.ಗೆ ಪ್ರತಿ ತಿಂಗಳಿಗೆ ಪ್ರಸರಣಾ ದರವಾದ ರೂ.1,27,400/–ಕ್ಕೆ ಪ್ರತಿಯಾಗಿ, 2017–18ಕ್ಕೆ ಪರಿಷ್ಕೃತ ಪ್ರಸರಣಾ ದರ ಪ್ರತಿ ಮೆ.ವ್ಯಾ.ಗೆ ಪ್ರತಿ ತಿಂಗಳಿಗೆ ರೂ.1,11,558/– ಇರುತ್ತದೆ. ವಿದ್ಯುತ್ ಸರಬರಾಜು ಸಂಸ್ಥೆಗಳಿಗೆ ಆಯೋಗವು ಅನುಮೋದಿಸಿರುವ ವಿದ್ಯುತ್ ಖರೀದಿ ದರದಲ್ಲಿ 2017–18ನೇ ಸಾಲಿನ ಪರಿಷ್ಕೃತ ವಿದ್ಯುತ್ ಪ್ರಸರಣಾ ದರವು ಒಳಗೊಂಡಿದೆ ಮತ್ತು ಅವುಗಳಿಗೆ ಅನುಮೋದಿಸಿದ ದರ ಪರಿಷ್ಕರಣೆಯಲ್ಲಿ ಅದು ಸೇರಿದೆ.

**ಮಂಗಳೂರು ಮತ್ತು AEQUS ವಿಶೇಷ ಆರ್ಥಿಕ ವಲಯ (SEZ)ಗಳಿಗೆ ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

ಆಯೋಗವು, ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ರೂ.57.39 ಕೋಟಿಗಳ ಮತ್ತು AEQUS ವಿಶೇಷ ಆರ್ಥಿಕ ವಲಯಕ್ಕೆ ರೂ.13.74 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಆಯೋಗವು, ಆರ್ಥಿಕ ವರ್ಷ 2018ನೇ ಸಾಲಿಗೆ ಕೈಗಾರಿಕಾ ಗ್ರಾಹಕರಿಗೆ MSEZನಲ್ಲಿ ಪ್ರತಿ ಯೂನಿಟ್‌ಗೆ ರೂ.6.34 ಹಾಗೂ AEQUS SEZನಲ್ಲಿ ಪ್ರತಿ ಯೂನಿಟ್‌ಗೆ ರೂ.6.55 ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

*****

**ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, MSEZ, ಮತ್ತು AEQUS SEZಗಳಿಗೆ ಸಂಬಂಧಿಸಿದ ದರ ಪರಿಷ್ಕರಣ ಆದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್ www.karnataka.gov.in/kerc ನಲ್ಲಿ ಪ್ರಕಟಿಸಲಾಗಿದೆ**